ಹೋಯಿತು. ಇದನ್ನು ನೋಡುತ್ತಿದ್ದ ಸ್ವಾಮೀಜಿಯವರಿಗೆ ತೀವ್ರ ಯಾತನೆಯಾಯಿತು. ಆ ಬುಡಕಟ್ಟು ಹೆಂಗಸಿನ ಯಾವ ಭಾಗದ ಪಕ್ಕೆಲೆಬು ಮುರಿಯಿತೊ, ಅದೇ ಸ್ಥಳದಲ್ಲಿ ಸ್ವಾಮೀಜಿಯವರಿಗೂ ತೀವ್ರವಾದ ಯಾತನೆ ಕಾಣಿಸಿಕೊಂಡಿತು. "ಅಯ್ಯೋ ನೋವು, ನಾನು ನಡೆಯಲಾರೆ" ಎಂದು ಹೇಳುತ್ತ ಸ್ವಾಮೀಜಿ ನಿಂತಲ್ಲೇ ನಿಂತುಬಿಟ್ಟರು.

ಮನುಷ್ಯರೆಲ್ಲರೂ ಪ್ರತ್ಯೇಕ ವ್ಯಕ್ತಿಗಳಂತೆ ಕಂಡರೂ ಅವರೆಲ್ಲರ ಮನಸ್ಸು ಕಾಣದ ತಂತುಗಳಿಂದ ಕೂಡಿಕೊಂಡಿರುತ್ತದೆ; ದೇಹದ ಎಲ್ಲೆಯನ್ನು ಮೀರಿ ಸಮೂಹ ಮನಸ್ಸಾಗಿ ಒಂದುಗೂಡುತ್ತದೆ. ಹಾಗಾಗಿ ಮನಸ್ಸುಗಳು ಎಷ್ಟೇ ಭಿನ್ನವಾದರೂ ನೋವಿನಲ್ಲಿ – ನಲಿವಿನಲ್ಲಿ ಪರಸ್ಪರ ಸ್ಪಂದಿಸುತ್ತವೆ. ಆದ್ದರಿಂದ ನೋವು – ನಲಿವುಗಳು ನಿರ್ದಂಧ್ವವಾಗಿ ಎಲ್ಲರಿಗೂ ಅನುಭವಕ್ಕೆ ಬರುವ ವಿಷಯಗಳು. ಈ ಹಿನ್ನೆಲೆಯಲ್ಲಿ ಇತರರ ದೈಹಿಕ ಯಾತನೆಗಳನ್ನು ಸ್ವಾಮೀಜಿಯವರು ಅನುಭವಿಸಿದ್ದು ಒಂದು ಅಸಾಧಾರಣ ಘಟನೆ ಎನ್ನಬಹುದು.

ಇದು ಒಂದು ಅಲೌಕಿಕ ವಿದ್ಯಮಾನ. ಆದರೆ ದಿನನಿತ್ಯದ ಜೀವನದಲ್ಲೂ ಸ್ವಾಮೀಜಿಯವರು ನಮ್ಮ ನಿಮ್ಮಂತೆ ಸ್ಪಂದಿಸು ತ್ತಿದ್ದರು ಎಂಬುದು ಗಮನಾರ್ಹ. ಜನ ಹಸಿವಿನಿಂದ ನರಳು ತ್ತಿರುವಾಗ ಸ್ವಾಮೀಜಿ, "ಇದಕ್ಕೆ ಪರಿಹಾರ ಏನು?" ಎಂದು ತವಕಪಡುತ್ತಿದ್ದರು.

ಒಮ್ಮೆ 'ಹಿತವಾದಿ' ಪತ್ರಿಕೆಯ ಸಂಪಾದಕ ಪಂಡಿತ ಸಖಾ ರಾಮ್ ಗಣೇಶ್ ಎಂಬಾತ ತನ್ನ ಸಂಗಡಿಗರೊಡನೆ ಸ್ವಾಮೀಜಿ ಯವರನ್ನು ನೋಡಲು ಬಂದ. ಅದು ಬರಗಾಲದ ಸಂದರ್ಭ; ಅನ್ನವಿಲ್ಲದೆ ಹಸಿವಿನ ಹಾಹಾಕಾರ ಎಲ್ಲೆಲ್ಲೂ ಕೇಳಿ ಬರುತ್ತಿತ್ತು. ಸ್ವಾಮೀಜಿ ಈ ತೀವ್ರ ಕ್ಷಾಮದ ಕುರಿತಾಗಿ ಬಹುವಾಗಿ ವ್ಯಸ್ತ ರಾಗಿದ್ದರು; ಸಖಾರಾಮ್ ಮತ್ತು ಸಂಗಡಿಗರೊಡನೆ ಕ್ಷಾಮ ಮತ್ತು ಆಹಾರ ಸಮಸ್ಯೆಯ ಕುರಿತು ದೀರ್ಘವಾಗಿ ಚರ್ಚಿಸಿದರು. ಚರ್ಚೆ ಮುಗಿದ ನಂತರ ಸಖಾರಾಮ್ ಗಣೇಶ್, "ಸ್ವಾಮೀಜಿ, ನಾವು ನಿಮ್ಮೊಡನೆ ಗಂಭೀರವಾದ ಅಧ್ಯಾತ್ಮ ವಿಚಾರಗಳನ್ನು ಚರ್ಚಿಸೋಣ ಎಂದು ಬಂದಿದ್ದೆವು; ಆದರೆ ತಾವು ದಿನನಿತ್ಯದ ಸಾಧಾರಣ ವಿಷಯಗಳನ್ನು ಕುರಿತು ಮಾತನಾಡಿದಿರಿ. ನಮ್ಮ ಸಮಯ ವ್ಯರ್ಥವಾಯಿತು" ಎಂದು ಹೊರಡಲು ಅನುವಾದರು. ಆಗ ಸ್ವಾಮೀಜಿ ಗಂಭೀರ ಸ್ವರದಲ್ಲಿ ಹೇಳಿದರು: "ನೋಡಿ ಮಹಾಶಯರೆ, ಈ ದೇಶದ ಕಟ್ಟಕಡೆಯ ಒಂದು ನಾಯಿ ಹಸಿ ದಿರುವ ತನಕ ಆ ನಾಯಿಯ ಹಸಿವನ್ನು ತಣಿಸುವುದನ್ನು ನಾನು ಧರ್ಮ ಎಂದು ಭಾವಿಸುತ್ತೇನೆ. ಮಿಕ್ಕಿದ್ದೆಲ್ಲವೂ ಧರ್ಮವೇ ಅಲ್ಲ, ಅದೊಂದು ಪೊಳ್ಳು ಧರ್ಮ." ಈ ಮಾತು ಸಖಾರಾಮ್ ಅವರ ಮೇಲೆ ಎಷ್ಟು ಪ್ರಭಾವ ಬೀರಿತೆಂದರೆ ಅವರು ಈ ಮಾತು ಗಳನ್ನು ಕಡೆಯತನಕ ನೆನಪಿನಲ್ಲಿಟ್ಟಿದ್ದರಂತೆ. ಈ ಸಂದರ್ಭದಲ್ಲಿ ಬ್ಲೇಕ್ ಕವಿಯ ಒಂದು ಪದ್ಯದ ಸಾಲುಗಳು ನೆನಪಿಗೆ ಬರುತ್ತವೆ:

A robin redbreast in a cage
Puts all heaven in a rage.
………….
A dog starved at his master's gate
Predicts the ruin of the state.

**ಪಂಜರದಲ್ಲಿಕ್ಕಿದ ಕೆಂಪೆದೆಯ ರಾಬಿನ್ ಪಕ್ಷಿಯ ತಳಮಳ**
**ತಲುಪುವುದು ಸ್ವರ್ಗವನೆ ಕಲಕುತ್ತ ಅದರ ನೆಮ್ಮದಿಯ**
. . . . . .. ..
**ಯಜಮಾನನ ಬಾಗಿಲಲಿ ಹಸಿದು ನಿಂತಿಹ ನಾಯಿ**
**ನುಡಿಯುವುದು ಮುಂಬರುವ ರಾಜ್ಯದವನತಿಯ**

'ಧರ್ಮ ಇರುವುದು ಪ್ರೀತಿಯಲ್ಲಿ' ಎಂದು ಸ್ವಾಮೀಜಿ ಹೇಳುತ್ತಿದ್ದರು. ಈ ಮಾತನ್ನು ಅವರು ಜೀವನದ ಎಲ್ಲ ಸಂದರ್ಭಕ್ಕೂ ಅನ್ವಯಿಸುತ್ತಿದ್ದರು. ಸ್ವಾಮೀಜಿಯವರ ಮಟ್ಟಿಗೆ ಹೇಳುವುದಾದರೆ, ಪ್ರೀತಿಯನ್ನು ಅವರಿಂದ ದೂರ ಇಡುವ ಸಂಕೋಲೆಯಾಗಿ ಸಂನ್ಯಾಸ ಪರಿಣಮಿಸಲಿಲ್ಲ. ಜನ ಸಾಮಾನ್ಯರ ನಿರೀಕ್ಷೆ ಏನೆಂದರೆ ಸರ್ವಸಂಗ ಪರಿತ್ಯಾಗಿಯಾದ ಸಂನ್ಯಾಸಿ ಎಲ್ಲ ಬಗೆಯ ಆತ್ಮೀಯ ಸಂಬಂಧಗಳಿಂದ ದೂರ ಇರಬೇಕು; ಕಮಲಪತ್ರದ ಮೇಲೆ ಜಾರುವ ನೀರಿನ ಹನಿಯಂತೆ ತನ್ನ ಕುಟುಂಬ, ಸ್ನೇಹಿತರು, ಆಪ್ತರು–ಇಷ್ಟರು ಮುಂತಾದವರಿಂದ ಸದಾ ಅಂತರ ಕಾಯ್ದುಕೊಳ್ಳಬೇಕು, ಯಾವುದೇ ಭಾವುಕತೆಗಳು ಈ ಸಂಬಂಧವಾಗಿ ಇರಬಾರದು. ಇಡೀ ಜಗತ್ತನ್ನೇ ಅಪ್ಪಿ ಕೊಳ್ಳುವ ಸಂನ್ಯಾಸಿ ತನ್ನ ಆಪ್ತರನ್ನು ಮಾತ್ರ ಕೃತಕವಾಗಿ ದೂರ ಇಡಬೇಕು! ಹೀಗೆ ನಿರೀಕ್ಷೆಯ ಪಟ್ಟಿ ಬೆಳೆಯುತ್ತಲೇ ಇರುತ್ತದೆ. ಸ್ವಾಮೀಜಿ ಯಾರ ಮೆಚ್ಚುಗೆಗಾಗಿಯೂ ಸಂನ್ಯಾಸ ಸ್ವೀಕರಿಸಿದವರಲ್ಲ. ಹಾಗಾಗಿ ಅವರು ಈ ಅಭಿಪ್ರಾಯಗಳನ್ನು ಒಪ್ಪುತ್ತಿರಲಿಲ್ಲ.

೧೮೯೦ರಲ್ಲಿ ಸ್ವಾಮೀಜಿಯವರು ವಾರಾಣಸಿಯಲ್ಲಿದ್ದರು. ಆ ಸಂದರ್ಭದಲ್ಲಿ ಅವರಿಗೆ ಅತ್ಯಂತ ಪ್ರಿಯರಾದ ಬಲರಾಮ ಬೋಸ್ ನಿಧನರಾದ ವಿಷಯ ತಿಳಿಯಿತು. ಸ್ವಾಮೀಜಿಯವರಿಗೆ ದುಃಖ ತಡೆಯಲಾಗಲಿಲ್ಲ; ಗಳಗಳನೆ ಅತ್ತುಬಿಟ್ಟರು. ಅಲ್ಲಿಯೇ ಇದ್ದ ಪ್ರಮದದಾಸ್ ಮಿತ್ರ ಎಂಬ ಪಂಡಿತರು ಹೇಳಿದರಂತೆ, "ಸ್ವಾಮೀಜಿ ನೀವು ಸಂನ್ಯಾಸಿಗಳು; ಹೀಗೆ ದುಃಖಿಸುವುದು ತರ ವಲ್ಲ" ಎಂದು. ಆಗ ಸ್ವಾಮೀಜಿ ಹೇಳಿದರು, "ಏನು ನೀವು ಹೇಳುವುದು, ಪ್ರಮದದಾಸ್ ಬಾಬು ? ನಾನು ಸಂನ್ಯಾಸಿ ನಿಜ. ಹಾಗೆಂದು ಸಂನ್ಯಾಸಿಯಾದವನು ಸದಾ ಕಾಲವೂ ಹೃದಯ ವಿಹೀನನಾಗಿರಬೇಕೆ? ನಿಜವಾದ ಸಂನ್ಯಾಸಿಯ ಹೃದಯವೆಂಬುದು ಸಾಧಾರಣ ಮನುಷ್ಯರ ಹೃದಯಕ್ಕಿಂತ ಹೆಚ್ಚು ಮೃದುವಾಗಿರುತ್ತದೆ. ನಾವೂ ಸಹ ಮನುಷ್ಯರೆ. ಅಲ್ಲದೇ ಬಲರಾಮ್ ಬಾಬು ನನ್ನ ಸೋದರ ಭಕ್ತ. ಅನುಕಂಪವೇ ಇಲ್ಲದ, ಹೃದಯ ಸಂವೇದನೆ ಗಳಿಲ್ಲದ ವಿರಕ್ತಿಯಲ್ಲಿ ನನಗೆ ನಂಬಿಕೆಯಿಲ್ಲ." ಪ್ರಮದದಾಸ್ ಮಿತ್ರ ಒಬ್ಬ ಪ್ರಕಾಂಡ ಪಂಡಿತ. ವೇದಾಂತದ ವಿಚಾರವಾಗಿ

ಸ್ವಾಮೀಜಿಯವರು ಈ ಪಂಡಿತನಿಂದ ಅನೇಕ ವಿಷಯಗಳನ್ನು ಕೇಳಿ ತಿಳಿದುಕೊಂಡಿದ್ದುಂಟು. ಆದರೇನು, ತಮ್ಮ ಮಾನವೀಯ ನಿಲುವನ್ನು ಸ್ವಾಮೀಜಿ ಯಾವ ಸಂದರ್ಭದಲ್ಲೂ ಬಿಟ್ಟುಕೊಡಲಿಲ್ಲ.

ಒಮ್ಮೆ ದೇಶದಾದ್ಯಂತ ಭೀಕರ ಬರಗಾಲ ವ್ಯಾಪಿಸಿದ್ದಾಗ ದೊಡ್ಡ ಪಂಡಿತನೊಬ್ಬ ಸ್ವಾಮೀಜಿಯವರನ್ನು ವೇದಾಂತ ಚರ್ಚೆಗೆ ಆಹ್ವಾನಿಸಿದ. ಹೇಗಾದರೂ ಮಾಡಿ ಸ್ವಾಮೀಜಿಯವರನ್ನು ಸೋಲಿಸಬೇಕೆಂಬುದು ಅವನ ಉದ್ದೇಶ. ಆದರೆ ಸ್ವಾಮೀಜಿಯವರಿಗೆ ಈ ಚರ್ಚೆಯಲ್ಲಿ ಎಳ್ಳಷ್ಟೂ ಆಸಕ್ತಿಯಿರಲಿಲ್ಲ. ಹಾಗೆಂದೇ ಸ್ವಾಮೀಜಿ, "ಪಂಡಿತ್‌ಜೀ, ಮೊದಲು ನಮ್ಮ ಜನಗಳ ಕಷ್ಟ ಪರಿಹರಿಸಲು ಏನನ್ನಾದರೂ ಮಾಡಿ, ಈ ಹೃದಯವಿದ್ರಾವಕವಾದ ಹಸಿವಿನ ಕೂಗನ್ನು ನಿಲ್ಲಿಸಲು ಮೊದಲು ಪ್ರಯತ್ನಿಸಿ. ಆನಂತರ ನನ್ನ ಜೊತೆಯಲ್ಲಿ ವೇದಾಂತದ ಚರ್ಚೆಗೆ ಬನ್ನಿ" ಎಂದುಬಿಟ್ಟರು.

ಸ್ವಾಮೀಜಿಯವರ ದೃಷ್ಟಿಯಲ್ಲಿ ಜಗತ್ತಿಗೆ ಹಿತವನ್ನು ಬಯಸದೆ, ವೈಯಕ್ತಿಕ ಮೋಕ್ಷವನ್ನು ಮಾತ್ರ ಸಂಪಾದಿಸುವುದು ಒಂದು ಹೀನಪ್ರವೃತ್ತಿ. ಒಮ್ಮೆ ಅವರು ಸ್ವಾಮಿ ವಿರಜಾನಂದರಿಗೆ ಹಾಗೂ ಪ್ರಕಾಶಾನಂದರಿಗೆ ಶ್ರೀರಾಮಕೃಷ್ಣರ ಸಂದೇಶವನ್ನು ಪ್ರಸಾರ ಮಾಡಲು ಪೂರ್ವಬಂಗಾಳಕ್ಕೆ (ಈಗಿನ ಬಾಂಗ್ಲಾದೇಶ) ಹೋಗಲು ಹೇಳಿದರು. ಆದರೆ ಸ್ವಾಮಿ ವಿರಜಾನಂದರಿಗೆ ಬಾಹ್ಯ ಪ್ರಪಂಚದಿಂದ ದೂರವೇ ಇದ್ದು ಆಧ್ಯಾತ್ಮ ಸಾಧನೆಯಲ್ಲೆ ಮುಳುಗಿ ದಿವ್ಯಾನುಭವವನ್ನು ಪಡೆಯಬೇಕೆಂಬ ತುಡಿತ. ಇದನ್ನು ಸ್ವಾಮೀಜಿಯವರಿಗೆ ಹೇಳಿಯೇಬಿಟ್ಟರು. ಇದಕ್ಕೆ ಪ್ರತಿಯಾಗಿ ಸ್ವಾಮೀಜಿಯವರು ಗಂಭೀರ ಸ್ವರದಲ್ಲಿ ಹೇಳಿದರು: "ನೀನು ಕೇವಲ ನಿನ್ನ ಬಿಡುಗಡೆಯನ್ನು ಮಾತ್ರ ಕುರಿತು ಚಿಂತಿಸುತ್ತಿದ್ದರೆ ಖಂಡಿತವಾಗಿಯೂ ನರಕಕ್ಕೆ ಹೋಗುತ್ತೀಯೆ. ಆಧ್ಯಾತ್ಮಿಕ ದಿವ್ಯಾನುಭೂತಿ ನಿನಗೆ ಬೇಕು ಎಂದರೆ ಮೊದಲು ಇತರರ ಮುಕ್ತಿಗಾಗಿ ಶ್ರಮಿಸು." ಅನಂತರ ಸ್ವಾಮೀಜಿ, ಮೃದುಧ್ವನಿಯಲ್ಲಿ ಹೇಳಿದರು, "ಮಕ್ಕಳೇ, ನಿಮ್ಮ ಹೃದಯ–ಆತ್ಮಗಳನ್ನು ಸಮರ್ಪಿಸಿ ಕೆಲಸ ಮಾಡಿ. ಇತರರಿಗೆ ಒಳಿತು ಮಾಡುತ್ತ ನರಕಕ್ಕೆ ಹೋದರೆ ತಾನೆ ಏನು? ನಾನು ಹೇಳುತ್ತೇನೆ, ಹೀಗಾಗುವುದು ನಿಮಗಷ್ಟೇ ಗಳಿಸಿಕೊಳ್ಳುವ ಸ್ವರ್ಗಕ್ಕಿಂತ ಸಾವಿರ ಪಾಲು ಉತ್ತಮ."

ಕೌಟುಂಬಿಕ ಸಂಬಂಧದ ವಿಷಯಗಳಲ್ಲೂ ಸ್ವಾಮೀಜಿ ಅತ್ಯಂತ ಸಹಜವಾಗಿ ಮಾನವೀಯ ಭಾವನೆಯಿಂದ ವರ್ತಿಸುತ್ತಿದ್ದರು. ಅಂತರರಾಷ್ಟ್ರೀಯ ಪ್ರಖ್ಯಾತಿ ಪಡೆದ ಮೇಲೂ ಸಹ ಅವರು ತಮ್ಮ ತಾಯಿಯೊಡನೆ ವಿಧೇಯ ಬಾಲಕನಂತೆ ನಡೆದುಕೊಳ್ಳುತ್ತಿದ್ದರು. ಒಮ್ಮೆ ಅವರ ತಾಯಿ ಬೇಲೂರು ಮಠಕ್ಕೆ ಬಂದು ಕೆಳಗಿನಿಂದಲೇ, 'ಬಿಲೂ....' ಎಂದು ಜೋರಾಗಿ ಸ್ವಾಮೀಜಿಯನ್ನು ಕೂಗಿಕರೆದರು. (ಸ್ವಾಮೀಜಿಯವರ ತಾಯಿ ಸ್ವಾಮೀಜಿಯನ್ನು ಚಿಕ್ಕಂದಿನಿಂದಲೂ ಹೀಗೆ ಕರೆಯುತ್ತಿದ್ದರು) ಮಹಡಿ ಮೇಲಿನ ಕೋಣೆಯಲ್ಲಿದ್ದ ಸ್ವಾಮೀಜಿಯವರಿಗೆ ತಾಯಿಯ ಧ್ವನಿ ಕೇಳಿತು. ಕೂಡಲೇ ಮಹಡಿಯಿಂದ ದಡಬಡನೆ ಇಳಿದು ಬಂದು ತಾಯಿಯೊಡನೆ ಆಪ್ತವಾದ ಮಾತುಕತೆಯಲ್ಲಿ ಮಗ್ನರಾದರು. ಸ್ವಾಮೀಜಿಯವರಿಗೆ ಕೊನೆಯವರೆಗೂ ಕಾಡಿದ ದುಃಖ ಎಂದರೆ, ತಾವು ತಮ್ಮ ತಾಯಿಯ ಕಷ್ಟ ಪರಿಹರಿಸಲು ಹೆಚ್ಚಾಗಿ ಏನೂ ಮಾಡಲಾಗಲಿಲ್ಲವಲ್ಲ ಎಂದು. ಅವರು ತಮ್ಮ ಕೊನೆಯ ದಿನಗಳಲ್ಲಿ ಬರೆದ ಒಂದು ಪತ್ರದಲ್ಲಿ ಈ ಕೊರಗು ಎದ್ದು ಕಾಣುತ್ತದೆ. ಅವರು ಬರೆಯುತ್ತಾರೆ: "ನಾನೊಬ್ಬ ಅಸಮರ್ಥ ಪುತ್ರ, ನಾನು ನನ್ನ ತಾಯಿಗಾಗಿ ಏನನ್ನೂ ಮಾಡಲಾಗಲಿಲ್ಲ, ಅವರನ್ನೆಲ್ಲ ಹಾಗೆಯೇ ಬಿಟ್ಟುಬಿಟ್ಟೆ." ಸ್ವಾಮೀಜಿಯವರಿಗೆ ತಮ್ಮ ಸೋದರ ಸೋದರಿಯರ ಮೇಲೆ ಅಪಾರ ಪ್ರೇಮವಿತ್ತು. ಒಂಭತ್ತು ಜನ ಸೋದರ ಸೋದರಿಯರನ್ನೊಳಗೊಂಡ ದೊಡ್ಡ ಕುಟುಂಬ ಅವರದು. ತಂದೆಯ ನಿಧನಾನಂತರ ಯುವಕ ನರೇಂದ್ರನು ಇಡೀ ಸಂಸಾರದ ಭಾರವನ್ನು ಹೊತ್ತುನಿಂತ. ಹಸಿವು ಬಡತನ ಎಂದರೆ ಏನು ಎಂದು ಅವರಿಗೆ ಆ ಸಂದರ್ಭದಲ್ಲಿ ನೇರವಾಗಿ ಅನುಭವವಾಯಿತು. ಮನೆಯಲ್ಲಿ ತಿನ್ನಲು ಕೂಳಿಲ್ಲದೆ, ಹಸಿದ ಹೊಟ್ಟೆಯಲ್ಲೇ ಹಲವಾರು ದಿನಗಳನ್ನು ಕಳೆದದ್ದುಂಟು. ಬಹುಶಃ ಈ ಅನುಭವಗಳು ಅವರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿರಬೇಕು. ಸ್ವಾಮೀಜಿ ಆಗಾಗ ಹೇಳುತ್ತಿದ್ದ ಮಾತು ಎಂದರೆ, "ನಾನು ಸಂತೋಷದ ಸಮಯದಲ್ಲಿ ಕಲಿತದ್ದಕ್ಕಿಂತ ಕಷ್ಟಗಳ ನಡುವೆ ಕಲಿತದ್ದೇ ಹೆಚ್ಚು."

ಸ್ವಾಮೀಜಿಯವರು ತುಳಿತಕ್ಕೆ ಒಳಗಾದ ಎಲ್ಲ ಬಗೆಯ ದುರ್ಬಲರ ಕಷ್ಟಗಳಿಗೆ ಸ್ಪಂದಿಸುತ್ತಾರೆ. ದಾರ್ಜಿಲಿಂಗ್‌ನಲ್ಲಿ ಒಮ್ಮೆ ಅತಿಯಾದ ಭೇದಿಯಿಂದ ನರಳುತ್ತ ದಾರಿಬದಿಯಲ್ಲಿ ಬಿದ್ದಿದ್ದ ರೋಗಿಯನ್ನು, ತಮ್ಮ ಸ್ನೇಹಿತನ ಮನೆಗೆ ಎತ್ತುಕೊಂಡು ಹೋಗಿ, ಅವನನ್ನು ಸ್ವಚ್ಛ ಮಾಡಿ, ಅವನ ಖಾಯಿಲೆ ವಾಸಿಯಾಗುವವರೆಗೂ ನೋಡಿಕೊಳ್ಳುತ್ತಾರೆ.

ವಿಶ್ವಧರ್ಮ ಸಮ್ಮೇಳನದಲ್ಲಿ ಖ್ಯಾತಿವೆತ್ತ ಈ ವೀರಸನ್ಯಾಸಿಯನ್ನು ಎಲ್ಲರೂ ಕೊಂಡಾಡುತ್ತಾರೆ. ಆದರೆ ಜೀವನಪ್ರೀತಿಯನ್ನು ಯಾವ ಸಂದರ್ಭದಲ್ಲೂ ಕಳೆದುಕೊಳ್ಳದೆ, ಇತರರಿಗಾಗಿ ಮರುಗುತ್ತಿದ್ದ ಸ್ವಾಮೀಜಿಯವರ ಹೃದಯವಂತಿಕೆಯನ್ನು ಅರ್ಥ ಮಾಡಿಕೊಳ್ಳುವುದೂ ಅಷ್ಟೇ ಮುಖ್ಯ.


**ನರಕಪ್ರಾಯವಾದ ಈ ಜಗತ್ತಿನಲ್ಲಿ, ಒಬ್ಬನೇ ಒಬ್ಬ ವ್ಯಕ್ತಿಯ ಹೃದಯದಲ್ಲಿ ಒಂದೇ ಒಂದು ದಿವಸವಾದರೂ, ಅಲ್ಪವಾದರೂ ಸಂತೋಷ ಮತ್ತು ಶಾಂತಿಗಳನ್ನು ತರುವುದು ಮಾತ್ರವಷ್ಟೇ ಸತ್ಯ. ಇದನ್ನು ನಾನು ನನ್ನ ಜೀವನದುದ್ದಕ್ಕೂ ಸಂಕಟಪಟ್ಟು ಕಲಿತುಕೊಂಡಿದ್ದೇನೆ. ಬೇರೆ ಎಲ್ಲವೂ ಬರಡು ಮಾತಷ್ಟೇ.**

– ಸ್ವಾಮಿ ವಿವೇಕಾನಂದ


# ಸ್ವಾಮಿ ವಿವೇಕಾನಂದರ ಜೀವನದರ್ಶನ – ೮

**ನಿರೂಪಣೆ:** ಸ್ವಾಮಿ ರಾಘವೇಶಾನಂದ ; **ಅನುವಾದ :** ಸಿ.ಎಸ್.ಮಂಗಳಮ್ಮ; **ಮೂಲ ಕಲಾಕೃತಿ :** ಪದ್ಮಾ ವಾಸನ್; **ವರ್ಣಪಾರದರ್ಶಿಕೆ:** ಬಿ.ಕೆ.ಸೋಮಶೇಖರ

೧೮೯೮ ರ ಡಿಸೆಂಬರ್ ೯ನೇ ತಾರೀಖು ತಮ್ಮ ಗುರುದೇವರ ಅಸ್ಥಿ ಅವಶೇಷಗಳನ್ನು ಬೇಲೂರು ಎಂಬ ಸ್ಥಳದಲ್ಲಿ ಕಟ್ಟಿದ ಮಂದಿರದಲ್ಲಿ ಸ್ವಾಮಿ ವಿವೇಕಾನಂದರು ಪ್ರತಿಷ್ಠಾಪಿಸಿದರು. ಆ ಮೂಲಕ ಬೇಲೂರು ಮಠವನ್ನು ಸ್ಥಾಪಿಸಿದರು. ಅದು ಶ್ರೀರಾಮಕೃಷ್ಣ ಪರಂಪರೆಯ ಮೂಲ ಕೇಂದ್ರವಾಗಿದೆ. ಹಾಗೆಯೇ ಶ್ರೀರಾಮಕೃಷ್ಣರ ಸಂದೇಶ ಪ್ರಚಾರದ ಪ್ರಮುಖ ಕೇಂದ್ರವೂ ಆಗಿದೆ. ಇದಲ್ಲದೆ ಸ್ವಾಮೀಜಿ ತಮ್ಮ ಗುರುದೇವರಿಗಾಗಿ ಒಂದು ಭವ್ಯ ಮಂದಿರವನ್ನು ಕಟ್ಟುವ ಯೋಜನೆಯನ್ನೂ ಹಾಕಿಕೊಂಡರು.



ನನ್ನ ಸೋದರರರೇ, ನೀವೆಲ್ಲರೂ ಹೃತ್ಪೂರ್ವಕವಾಗಿ ಭಗವಂತನನ್ನು ಹೀಗೆ ಪ್ರಾರ್ಥಿಸಿ: "ಯುಗಾವತಾರ ಶ್ರೀರಾಮಕೃಷ್ಣರ ನೆಲೆಯಾದ ಈ ಸ್ಥಳವು ಅವರ ಆಶೀರ್ವಾದದಿಂದ ಹಾಗೂ ಪವಿತ್ರ ಸಾನ್ನಿಧ್ಯದಿಂದ ಚಿರಸ್ಥಾಯಿಯಾಗಲಿ ಹಾಗೂ ಅದ್ವಿತೀಯ ಕೇಂದ್ರವಾಗಲಿ. ಹಾಗೆಯೇ ವಿವಿಧ ಧರ್ಮಗಳ, ಮತಗಳ ಸಮನ್ವಯದ ದಿವ್ಯಕ್ಷೇತ್ರವಾಗಲಿ."



ತಮ್ಮ ಕನಸುಗಳು ನನಸಾಗುತ್ತಿರುವುದನ್ನು ಕಂಡ ಸ್ವಾಮೀಜಿ ಸಂತೃಪ್ತರಾದರು. ಮಠದ ಸಂನ್ಯಾಸಿಗಳು ಹಾಗೂ ಭಕ್ತರ ಮೂಲಕ ರಾಮಕೃಷ್ಣ ಮಿಷನ್ ಅನೇಕ ಕ್ಷೇತ್ರಗಳಲ್ಲಿ ಸೇವಾಕಾರ್ಯಗಳನ್ನು ಪ್ರಾರಂಭಿಸಿತು. ಅವುಗಳಲ್ಲಿ ಕೆಲವು ಹೀಗಿವೆ: ಸಮಾಜಕಲ್ಯಾಣ, ಶಿಕ್ಷಣ ಮತ್ತು ಆರೋಗ್ಯ. ಹಾಗೆಯೇ, ಪ್ರಕೃತಿವಿಕೋಪದಿಂದ ಉಂಟಾದ ಕ್ಷಾಮ, ನೆರೆಹಾವಳಿ ಹಾಗೂ ಬೆಂಕಿ ಅನಾಹುತ ಮುಂತಾದ ಸಂದರ್ಭಗಳಲ್ಲಿ ಉತ್ತಮ ಪರಿಹಾರ ಕಾರ್ಯವನ್ನು ಮಾಡಲು ಮಿಷನ್ ಆರಂಭಿಸಿತು.

ತಮ್ಮ ಕಾರ್ಯಗಳೆಲ್ಲ ಸುಸೂತ್ರವಾಗಿ ನಡೆಯವುದಕ್ಕಾಗಿ ಸ್ವಾಮೀಜಿ ಕಠಿಣ ಪರಿಶ್ರಮಪಟ್ಟರು. ಹೀಗಾಗಿ ಆಯಾಸದಿಂದ ಅವರ ಆರೋಗ್ಯ ಹದಗೆಟ್ಟಿತು. ಪದೇ ಪದೇ ರೋಗಕ್ಕೆ ಈಡಾಗುತ್ತಿದ್ದರು. ಆರೋಗ್ಯ ಸುಧಾರಣೆಗಾಗಿ ವೈದ್ಯರು ಹಾಗೂ ಸೋದರ ಸಂನ್ಯಾಸಿಗಳು ಇನ್ನೊಮ್ಮೆ ಸಮುದ್ರಯಾನ ಕೈಗೊಳ್ಳಬೇಕೆಂದು ಅವರಿಗೆ ಸಲಹೆ ನೀಡಿದರು.

